**ಶರೀಫಾ ವಿಜಲಿವಾಲಾ** ಗುಜರಾತ್‌ನ ಭಾವನಗರದ ಜಿಲ್ಲೆಯ ಅಮರ್‌ಗಢ್‌ನವರು. ಓದಿದ್ದು ಫಾರ್ಮಸಿ. ಕೆಲಕಾಲ ಫಾರ್ಮಸಿ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿದ ಬಳಿಕ, ಸಾಹಿತ್ಯದ ಸೆಳೆತದಿಂದ ಮತ್ತೆ ವಿಶ್ವವಿದ್ಯಾನಿಲಯದಲ್ಲಿ ಗುಜರಾತಿ ವಿಭಾಗಕ್ಕೆ ವಿದ್ಯಾರ್ಥಿನಿಯಾಗಿ ಸೇರಿದರು. ಅನುವಾದಕಿಯಾಗಿ, ವಿಮರ್ಶಕಿಯಾಗಿ ಗುಜರಾತಿಯಲ್ಲಿ ಜನಪ್ರಿಯರು. ಪ್ರಸ್ತುತ ವೀರ್ ನರ್ಮದ ಸೌತ್ ಗುಜರಾತ್ ಯೂನಿವರ್ಸಿಟಿಯಲ್ಲಿ ಪ್ರಾಧ್ಯಾಪಕಿ. ವಿಮರ್ಶೆ, ಅನುವಾದ ಮತ್ತು ಸೃಜನಶೀಲ ಬರಹ ಸೇರಿದಂತೆ 15ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

ಇನ್ನೂ ಒಂದು ವಿಚಾರವಿದೆ. ಸಾಮಾಜಿಕ ಅಂಗೀಕಾರ ದೊರೆಯುವ ಅವಕಾಶವಿಲ್ಲದ ಆದರೆ ಪರಿಶುದ್ಧವಾದ ಪ್ರೀತಿ ಪುರುಷ ಮತ್ತು ಮಹಿಳೆಯ ಅಗತ್ಯವಾಗಿರುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಸಾಮಾಜಿಕವಾಗಿ ಮಹಿಳೆಯೇ ಎಲ್ಲ ಗಾಯಗಳ ನೋವನ್ನೂ ಅನುಭವಿಸಬೇಕಾಗುತ್ತದೆ. ಹಿಮಾಂಶಿ ಅವರ 'ಇತ್ರಾ', 'ಅಕ್ಬಂಧ್', 'ಖಾಂಡಣಿಯಾಮಾ ಮಾಥೂಂ', 'ಸಾಂಜ್ನೋ ಸಮಯ್', 'ಅಗ್ಯಾರ್ಮೋ ಪತ್ರ್' ಮುಂತಾದ ಕಥೆಗಳು ಹೀಗೆ ವಿವಾಹೇತರ ಸಂಬಂಧಗಳ ಸಂಕೀರ್ಣತೆಯನ್ನು ಒಳಗೊಂಡಿವೆ.

ಗುಜರಾತಿ ಕಥಾಲೋಕದಲ್ಲಿ ಅನ್ವೇಷಣೆಗೊಳ್ಳದ ಜಗತ್ತುಗಳಲ್ಲಿ ಲೈಂಗಿಕ ಕಾರ್ಯಕರ್ತೆಯರ ಬದುಕೂ ಒಂದು. ಇಂದಿನ ಕಾಲಮಾನದಲ್ಲಿ ಮಹಿಳೆಯ ಸ್ಥಿತಿಗತಿ ಕಿಂಚಿತ್ ಬದಲಾಗಿರಬಹುದು. ಆದರೆ, ಲೈಂಗಿಕ ಕಾರ್ಯಕರ್ತೆಯರ ವಿಷಯದಲ್ಲಿ ಕಾಲವು ಯಾವುದೇ ಬದಲಾವಣೆಯನ್ನು ತಂದಿಲ್ಲ ಎನ್ನುವುದು ಸತ್ಯ. ಪ್ರತಿಯೊಬ್ಬ ಮಹಿಳೆಯೂ ಲೈಂಗಿಕ ಕಾರ್ಯಕರ್ತೆಯಾಗುವ ಮುನ್ನ ಓರ್ವ ಮಹಿಳೆಯೇ ಆಗಿರುತ್ತಾಳೆ. ಯಾರೂ ಈ ಸ್ಥಿತಿಯನ್ನು ತಾವಾಗಿಯೇ ಬಯಸುವುದಿಲ್ಲ. ಬಹಳ ಅಸಹಾಯಕತೆಯಿಂದ ಅವರು ಈ ಕ್ಷೇತ್ರಕ್ಕೆ ಬರುತ್ತಾರೆ, ಆದರೂ ಅವರನ್ನು ಜಗತ್ತು ಯಾವತ್ತೂ ಸ್ವೀಕರಿಸುವುದಿಲ್ಲ. ಹಿಮಾಂಶಿ ಅವರು ಈ ಅಂಶವನ್ನು ಬಹಳ ಆಸ್ಥೆಯಿಂದ ಗಮನಿಸುವ ಮೂಲಕ ಮಹಿಳೆಯು ಈ ಕ್ಷೇತ್ರದಲ್ಲಿ ನರಳುವಂತಾಗುವ ಪರಿಸ್ಥಿತಿಯನ್ನು ತಮ್ಮ ಕಥೆಗಳಲ್ಲಿ ವಿಶ್ಲೇಷಿಸಿದ್ದಾರೆ. 'ಕಿಮ್ಮತ್', 'ಶಾಪ್', 'ಖರೀದಿ', 'ಮೋತ್', 'ಇ ಸವಾರ್' ಕಥೆಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಹಿಮಾಂಶಿ ಬೆನ್ ಅವರು 2002ರಲ್ಲಿ ನಡೆದ ಕೋಮು ಗಲಭೆಯ ನಂತರ ಸಮಕಾಲೀನ ವಾಸ್ತವದ ಕಥೆಗಳನ್ನು ಕಟ್ಟಿಕೊಡುವುದು ಸಾಧ್ಯವೇ ಎಂಬ ಬಗ್ಗೆ ಸ್ವಲ್ಪ ಆತಂಕಗೊಂಡಿದ್ದಿರಬಹುದು. ತಮ್ಮ ಸಾಮರ್ಥ್ಯದ ಬಗ್ಗೆ ಅವರಿಗೆ ಸಂಶಯಗಳಿದ್ದವೇನೋ. ಆದರೆ ಅವರು ಸಮಕಾಲೀನ ಸ್ಥಿತಿಗತಿಯ ಎಳೆಯನ್ನೇ ಕಥೆಯ ನೇಯ್ಗೆಯಲ್ಲಿ ಸೇರಿಸಿಕೊಳ್ಳುವಲ್ಲಿ ಖಂಡಿತ ಹಿಂದೆ ಬಿದ್ದಿಲ್ಲ. ಈ ಕಾಲಮಾನದ ಅವರ ಕಥೆಗಳಲ್ಲಿ ಕಾಣುವ ಕಾಳಜಿಯೆಂದರೆ, ಸಾರ್ವಜನಿಕ ಜೀವನದಲ್ಲಿ ಎದ್ದು ಕಾಣಿಸುವ ನೈತಿಕತೆಯ ಕುಸಿತ. ಒಬ್ಬ ವ್ಯಕ್ತಿಯ ಹತಾಶೆ, ದೌರ್ಬಲ್ಯ ಮತ್ತು ಪ್ರಾಮಾಣಿಕ ಸಿಟ್ಟು – ಬದಲಾಗುತ್ತಿರುವ ಸಾಮಾಜಿಕ ರಾಜಕೀಯ ಲೆಕ್ಕಾಚಾರಗಳ ನಡುವೆ ಸಿಕ್ಕಿಹಾಕಿಕೊಂಡಂತಿದೆ ಎಂಬುದನ್ನು ಅವರ ಈ ಕಾಲದ ಕಥೆಗಳು ಹೇಳುತ್ತವೆ. ಕೊಳಕು, ಅಸಮಾನತೆ, ಹೋರಾಟ ಮತ್ತು ಬಡತನದಿಂದ ತುಂಬಿರುವ ವಾತಾವರಣದಲ್ಲಿ ಬದುಕುತ್ತಿರುವ ವ್ಯಕ್ತಿಗಳ ಶೋಷಣೆಯನ್ನು ಬಣ್ಣಿಸುವಾಗ ಅವರು, ಕಥನ ಕೌಶಲದ ಸೌಂದರ್ಯಶಾಸ್ತ್ರದೊಂದಿಗೆ ರಾಜಿಯಾಗುವುದಿಲ್ಲ. ನಮ್ಮ ಸಮಕಾಲೀನ ಬಾಹ್ಯ ಜಗತ್ತಿನ ವಾಸ್ತವವನ್ನು ಕಲಾಲೋಕದೊಳಗೆ ಪ್ರಸ್ತುತಪಡಿಸುವ ತಮ್ಮ ಸಾಮಾಜಿಕ ಬದ್ಧತೆಯನ್ನು ಕಾಪಾಡಿಕೊಳ್ಳುತ್ತ ಹಿಮಾಂಶಿ ಶೆಲತ್ ಅವರು ಕಲೆಯ ಕುರಿತಾಗಿ ತಮಗಿರುವ ಜವಾಬ್ದಾರಿಯನ್ನು ನಿಭಾಯಿಸುತ್ತಾರೆ. 'ಕೋಯಿ ಬಿಜೋ ಮಾಣಸ್', 'ಲಾಲ್ ಪಾಣಿ' ಮುಂತಾದ ಕಥೆಗಳಲ್ಲಿ ಅವರ ಕಥನ ಕೌಶಲದ ಸೌಂದರ್ಯವನ್ನು ಓದುಗರು ಸವಿಯಬಹುದು. 'ಆಜೆ ರಾತೇ', 'ವಾಮನ್', 'ವಳ್ತಿ ಮುಸಾಫರಿ', 'ಸಜಾ', 'ಸಾತ್ಮೋ ಮೊಹಿನೋ' ಮುಂತಾದ ಕಥೆಗಳು 2002ರ ಕೋಮುಗಲಭೆಯ ನಂತರ ಹುಟ್ಟಿದ ಅನೇಕ ಪ್ರಶ್ನೆಗಳಿಗೆ